d) if so, and when the same will be paid ?

SRI V. L. PATIL (Minister for Revenue).--a) This land is proposed for acquisition.

b) Compensation is not paid, as the acpuisition is still under process.

c) On account of non completion of land Acquisition Proceedings.

d) Immediately after finalisation of the Land Acquisition Proceedings.

ಹಾಸನ ಜಿಲ್ಲೆಯಲ್ಲಿ ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸುವ ಬಗ್ಗೆ

(805) ಶ್ರೀ ಜಿ. ಎಸ್. ಬಸವರಾಜು (ಅರಸೀಕೆರೆ) ಮಾನ್ಯ ಸಹಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹಾಸನ ಜಿಲ್ಲೆಯಲ್ಲಿ ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ಅನುಮತಿ ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಯಾವಾಗ ಅನುಮತಿ ನೀಡಲಾಯಿತು ಮತ್ತು ಸದರೀ ಗಿರಣಿಯನ್ನು ಸ್ಥಾಪಿಸುವಲ್ಲಿ ಇಲ್ಲಿಯವರೆಗೆ ತಡವಾಗಿರುವುದಕ್ಕೆ ಕಾರಣವೇನು ?

ಇ) ಸದರೀ ಗಿರಣಿಯನ್ನು ಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ ಯಾವುದಾದರೂ ಪ್ರದೇಶವನ್ನು ತಂತ್ರಜ್ಞರು ಸೂಚಿಸಿರುವರೆ ಮತ್ತು ಹಾಗಿದ್ದಲ್ಲಿ ಆ ಪ್ರದೇಶವಾವುವು.

ಈ) ಹಾಗೆ ಸೂಚಿಸಿದಿದ್ದಲ್ಲಿ ಆದಕ್ಕೆ ಕಾರಣವೇನು.

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಸಹಕಾರ ಮಂತ್ರಿಗಳು).-

ಆ) ಆದರೆ ರಾಜ್ಯ ಸರ್ಕಾರ ಅನೌಪಚಾರಿಕವಾಗಿ ಮೈಸೂರು ಹಾಗೂ ಹಾಸನ ಜಿಲ್ಲೆಯ ಕ್ಷೇತ್ರಕ್ಕಾಗಿ ಅರಸೀಕೆರೆಯಲ್ಲಿ ನೇಕಾರರ ವಲಯದಲ್ಲಿ ಒಂದು ಸಹಕಾರಿ ನೂಲಿನಗಿರಣಿಯನ್ನು ಸ್ಥಾಪಿಸಲು ತೀರ್ಮಾನಿಸಿದೆ. ಈ ಹಂತದಲ್ಲಿ ಕೇಂದ್ರ ಸರ್ಕಾರದ ಅನುಮತಿ ಪಡೆಯಲು ಪ್ರಶ್ನೆ ಉಬ್ಬವಿಸುವುದಿಲ್ಲ.

ಅ) ಮೇಲಿನ ಪ್ರಶ್ನೆಯ ಉತ್ತರದಿಂದ ಈ ಪ್ರಶ್ನೆಗೆ ಉತ್ತರ ಉಬ್ಬವಿಸದು.

ಇ) ಇಲ್ಲ.

ಈ) ಈ ನೂತನ ನೂಲಿನ ಗಿರಣಿಗೆ ಪಾಲು ಬಂಡವಾಳದ ಸಂಗ್ರಹಣೆ ಆಗಿರದೆ ಗಿರಣಿಯನ್ನು ನೊಂದಾಯಿಸಿರುವುದಿಲ್ಲದಿರುವುದೇ ಕಾರಣ.

ಶ್ರೀ ಎಂ. ಮಹದೇವ್.—ಸ್ವಾಮಿ (ಅ) ಪ್ರಶ್ನೆಗೆ ಉತ್ತರವಾಗಿ, ಮಾನ್ಯ ಮಂತ್ರಿಗಳು ಮೈಸೂರು ಹಾಗೂ ಹಾಸನ ಜಿಲ್ಲೆಯ ಅರಸೀಕೆರೆಯ ನೇಕಾರರ ವಲಯದಲ್ಲಿ ಒಂದು ಸಹಕಾರಿ ನೂಲಿನ ಗಿರಣಿಯನ್ನು ಸ್ಥಾಪಿಸುವುದಕ್ಕೆ ಅನೌಪಚಾರಿಕವಾಗಿ ತೀರ್ಮಾನ ತೆಗೆದುಕೊಂಡಿದ್ದೇನೆಂದು ಹೇಳಿದ್ದಾರೆ. ಎರಡನೆಯದಾಗಿ ಈ ನೂತನ ನೂಲಿನ ಗಿರಣಿಗೆ ಪಾಲು ಬಂಡವಾಳದ ಸಂಗ್ರಹಣೆ ಆಗಿರದೆ ಗಿರಣಿಯನ್ನು ನೊಂದಾಯಿಸಿಲ್ಲದಿರುವುದೇ ಕಾರಣ ಎಂದು ಹೇಳಿದ್ದಾರೆ. ಇದನ್ನು ಅಧಿಕೃತವಾಗಿ ಯಾವಾಗ ಮಾಡುತ್ತೀರಾ ?

ಶ್ರೀ ಆರ್. ಎಲ್. ಜಾಲಪ್ಪ --ಅಧ್ಯಕ್ಷರೇ, ಗಿರಣಿ ಸ್ಥಾಪನೆ ಆಗಬೇಕಾದರೆ ಅಲ್ಲಿರತಕ್ಕವರು ಮುಂದೆ ಬರಬೇಕು. ಷೇರು ಮೊಬಲಗು ವಸೂಲ್ಮಾಡಬೇಕು. ರಿಜಿಸ್ಟರ್ ಮಾಡಿಸಬೇಕು, ಕೇಂದ್ರ ಸರ್ಕಾರದ ಅನುಮತಿ ಕೇಳಬೇಕು, ಜನ ಮುಂದೆ ಬರಬೇಕು. ಅರಸೀಕೆರೆ ಕಾಟನ್ ಸೊಸೈಟಿ ಸೂಪರಸೀಡ್ ಆಗಿದೆ. ಸೇರಿಸಿ ಎಂದು ಹೇಳಿದರೆ ಕಷ್ಟವಾಗುತ್ತದೆ.

ಶ್ರೀ ಎಂ. ಮಹದೇವ್. --ಸಚಿವರು ಅನೌಪಚಾರಿಕವಾಗಿ ಎಂದು ಉತ್ತರದಲ್ಲಿ ಹೇಳಿದ್ದಾರೆ. ಅಧಿಕೃತವಾಗಿ ಯಾವಾಗ ಮಾಡುತ್ತೀರೆಂದು ತಿಳಿಸಿಲವಿರಾ ?

ಶ್ರೀ ಆರ್ ಎಲ್. ಜಾಲಪ್ಪ.--ಈಗಾಗಲೇ ತೀರ್ಮಾನವಾಗಿ 7--8 ವರ್ಷವಾಗಿದೆ. ಈಗ ಇದನ್ನು ಹುಡುಕಬೇಕಾದರೆ ಬಹಳ ಕಷ್ಟವಾಗಿದೆ.

ಕುಂದುಗೋಳ ತಾಲ್ಲೂಕಿನಲ್ಲಿ ಕೃಷಿಮೂರಾಟ ಸಮಿತಿಯಲ್ಲಿ ಸಿಮೆಂಟಿನ ದುರುಪಯೋಗ

325 (800) ಶ್ರೀ ಬಿ. ಜಿ. ಪಾಟೀಲ (ರಾಣಿಬೆನ್ನೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?